ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಎಲ್ಲಾದರೂ ಹೋಗುತ್ತಾರೆ. ಅದಕ್ಕೆ ಮಾಡನಾಡುತ್ತೇನೆ.

7. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

(ಗೊಂದಲ)

ವಿಷಯ:– ಘಟಪ್ರಭಾ ನದಿಗೆ ಒಂದೂವರೆ ಟಿ.ಎಂ.ಸಿ. ಕುಡಿಯುವ ನೀರು ಬಿಡುಗಡೆ ಮಾಡುವ ಬಗ್ಗೆ.

ಅಧ್ಯಕ್ಷರು:– ಮೊದಲು ಇದು ಪೂರೈಸಲಿ ತಾಳ್ರಿ. ಅವರು ಎಲ್ಲಿಗೂ ಹೋಗುವುದಿಲ್ಲ. ಚರ್ಚೆ ಮಧ್ಯದಲ್ಲಿ ಮಾತನಾಡುವುದಕ್ಕೆ ಆಗುತ್ತದೆಯೇ?

ಶ್ರೀ ಗೋವಿಂದ ಎಂ. ಕಾರಜೋಳ:– ಘಟಪ್ರಭಾ ಯೋಜನೆಗೆ ಒಂದೂವರೆ ಟಿ.ಎಂ.ಸಿ. ನೀರನ್ನು ಬಿಡುಗಡೆ ಮಾಡುವುದಕ್ಕೆ ಅವರು. ..

(ಗೊಂದಲ)

ಅಧ್ಯಕ್ಷರು:– ಬಿಡುಗಡೆ ಮಾಡಿ ನಾಳೆ. ಒಂದೂವರೆ ಟಿಎಂಸಿ ನೀರು ಬಿಡಬೇಕು ಎಂದರೆ ಬಿಡ್ರಿ.

ಶ್ರೀ ಗೋವಿಂದ ಎಂ. ಕಾರಜೋಳ:– ಹೇಗೆ ಮಾಡುತ್ತೀರಿ ಹೇಳಿ. ಘಟಪ್ರಭಾ ನದಿಗೆ ಒಂದೂವರೆ ಟಿ.ಎಂ.ಸಿ. ನೀರನ್ನು ಮುಧೋಳ ಹಾಗೂ ಕೆಲವು ಗ್ರಾಮಗಳಿಗೆ ಕುಡಿಯವು ನೀರಿಗೆ ಬಿಡುಗಡೆ ಮಾಡಬೇಕು. ಒಂದು ಹೇಳಿ ಬಿಡುತ್ತೇನೆ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ:– ಮಾನ್ಯ ಅಧ್ಯಕ್ಷರೆ, ಇದನ್ನು ಪರಿಶೀಲನೆ ಮಾಡುತ್ತೇವೆ.

(ಗೊಂದಲ)

ಶ್ರೀ ಗೋವಿಂದ ಕಾರಜೋಳ:– ಪರಿಶೀಲನೆ ಮಾಡುತ್ತೇನೆ ಎಂದು ಹೇಳಬೇಡಿ. ಕುಡಿಯುವ ನೀರಿಗೆ ಬಿಡುಗಡೆ ಮಾಡಬೇಕು.

ಅಧ್ಯಕ್ಷರು:– ಆಯಿತು, ಪರಿಶೀಲನೆ ಮಾಡುತ್ತಾರೆ. ಹಾಗೆ ಎಲ್ಲಾ ಹೇಳುವುದಕ್ಕೆ ಆಗುತ್ತದೆ ಏನ್ರಿ? Ground reality ತಿಳಿದುಕೊಳ್ಳುವುದಕ್ಕೆ ಹೋಗದೇ ಹಾಗೆ ಹೇಳುವುದಕ್ಕೆ ಆಗುತ್ತದೆಯೇ?

(ಗೊಂದಲ)

ಅಧ್ಯಕ್ಷರು:– Active ಆಗಿ consider ಮಾಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಎಂ.ಬಿ. ಪಾಟೀಲ:– Normal course ನಲ್ಲಿ I.P.C. ಯವರಿಗೆ ಬರುತ್ತಿತ್ತು. ಈಗ Regional Commissionerಗೆ ಬರುತ್ತದೆ.

(ಗೊಂದಲ)

ಶ್ರೀ ಗೋವಿಂದ ಕಾರಜೋಳ:– ಕುಡಿಯುವ ನೀರಿಲ್ಲ.

(ಗೊಂದಲ)

ಅಧ್ಯಕ್ಷರು:– ನೀವು Minister ಆಗಿ ಕೆಲಸ ಮಾಡಿದವರು.

(ಗೊಂದಲ)

ಶ್ರೀ ಗೋವಿಂದ ಕಾರಜೋಳ:– ಅವರಿಗೆ ಹೇಳಿ, direction ಕೊಡಿ. ಘಟಪ್ರಭ ನದಿ ಮಲಿನವಾಗಿ ಇವತ್ತು ...

ಅಧ್ಯಕ್ಷರು:– Any Minister, without background, without knowing, sudden ಆಗಿ ಹೇಳುವುದಕ್ಕೆ ಆಗುತ್ತದೆಯೇ?

(ಗೊಂದಲ)

ಅಧ್ಯಕ್ಷರು:– ಆಯಿತು, ಹೇಳಿ.

(ಗೊಂದಲ)

ಶ್ರೀ ಗೋವಿಂದ ಕಾರಜೋಳ:– directions ಕೊಡುತ್ತೇವೆ ಎಂದು ಹೇಳಿಬಿಡಲಿ.

(ಗೊಂದಲ)

ಶ್ರೀ ಎಂ.ಬಿ. ಪಾಟೀಲ:– ನಮ್ಮ Department ನಿಂದ Reginal Commissioner ರವರಿಗೆ ಕಳುಹಿಸಿ ಪರಿಶೀಲನೆ ಮಾಡುತ್ತೇವೆ.

ಶ್ರೀ ಗೋವಿಂದ ಕಾರಜೋಳ:– ಅದನ್ನು release ಮಾಡುತ್ತೇವೆ ಎಂದು ಹೇಳಿದರೆ ಆಯಿತು ಅಷ್ಟೆ.

ಅಧ್ಯಕ್ಷರು:– ನಾಳೆ release ಆಗದೇ ಹೋದರೆ?

ಶ್ರೀ ಎಂ.ಬಿ. ಪಾಟೀಲ:– ನಾವು release ಮಾಡುತ್ತೇವೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಪರಿಶೀಲನೆ ಮಾಡುತ್ತೇವೆ.

(ಗೊಂದಲ)

ಶ್ರೀ ಗೋವಿಂದ ಕಾರಜೋಳ:– ಕುಡಿಯುವ ನೀರಿಗೆ ಇಟ್ಟಿದ್ದೀರಲ್ಲಾ? 8 ಟಿ.ಎಂ.ಸಿ....

ಅಧ್ಯಕ್ಷರು:– ಇವೆಲ್ಲಾ ಹಳೆಯ ಸ್ಕೀಂಗಳು, ಅವುಗಳಿಗೆ Water release ಮಾಡುವುದಕ್ಕೆ ಒಂದು ಫಾರ್ಮುಲಾ ಇಲ್ಲವೇ? ಫಾರ್ಮುಲಾ ಇದ್ದರೆ ಬಿಡುತ್ತಾರೆ ಅಷ್ಟೆ. ಆಯಿತು ಹೇಳಿ. 5 ನಿಮಿಷ ಕಾಲಾವಕಾಶ ಕೊಡುತ್ತೇನೆ.